'ನಿಮ್ಮಲ್ಲಿ ಒಡಕು ತರುವ ಉದ್ದೇಶ ನನಗಿಲ್ಲ ಅಪ್ಪ. ನಾನ್ಯಾವತ್ತೂ ಇಲ್ಲಿ ಕಾಯಂ ಉಳಿಯುವವಳೂ ಅಲ್ಲ. ಆದರೆ ತವರನ್ನ ಬಯಸುವ ಹೆಂಗರುಳು ನನ್ನ ಎಳತಂತು. ನೀನು ಅಮ್ಮ ಹುಂ ಅಂದರೆ ವರ್ಷಕ್ಕೆ ಒಮ್ಮೆಯೋ ಇರ್ಮೆಯೋ ಬಂದು ನಿಮ್ಮ ಮುಖ ನೋಡಿಕೊಂಡು ಹೋಗುವ ಆಸೆ. ನೀವು ಬೇಡ ಎಂದರೆ ಇನ್ನು ಬರುವುದೂ ಇಲ್ಲ. ಅಣ್ಣ ಒಪ್ಪಿಗೆ ಕೊಟ್ಟರೆ ನೀವೇ ನಮ್ಮಲ್ಲಿಗೆ ಬಂದು ಹೋಗಿ.'

'ಈಗ ನಿಶ್ಚಿಂತೆಯಿಂದ ನಿದ್ದೆ ಮಾಡಿ. ಪರಿವರ್ತನೆಯ ಹಂತದಲ್ಲೊಂದು ಸಂಕ್ರಮಣ ಇದ್ದೇ ಇರುತ್ತದೆ. ನೀವು ಬರಬಹುದೇ ಬೇಡವೆ ಎನ್ನುವುದನ್ನ ನಾನು ಫೋನ್ ಮಾಡಿ ತಿಳಿಸುತ್ತೇನೆ,' ಎಂದರು ಭಟ್ಟರು. ಮತ್ತೆ ಸುಮಾರು ಅರ್ಧ ಗಂಟೆಯಷ್ಟು ಹೊತ್ತು ಮಗಳೊಟ್ಟಿಗೆ ಮಾತಾಡುತ್ತಿದ್ದು ಕೆಳಗಿಳಿದು ಬಂದುಬಿಟ್ಟರು. ಮಲಗಿದರು ಮತ್ತದೇ ಯೋಚನೆ. ಅವಳು ಪಾಪಿ ಹೌದು. ಸಮಾಜದ ದೃಷ್ಟಿಯಲ್ಲಿ, ಧರ್ಮದ ದೃಷ್ಟಿಯಲ್ಲಿ. ಆದರೆ ಮಾನವೀಯತೆಯ ದೃಷ್ಟಿಯಲ್ಲಿ? ಪಾಪಕೂಪದಿಂದ ಮೇಲೆದ್ದು ಬರಲು ಇಚ್ಛಿಸುವವರಿಗೆ ಸಾಂತ್ವನ ಹೇಳಬಾರದೆ? ಕುವೆಂಪುವಿನ ರಾಮನೇ ಹೇಳಿಲ್ಲವೆ – 'ಪಾಪಿಗುದ್ಧಾರಮಿಹುದೌ ಸೃಷ್ಟಿಯ ಈ ಮಹದ್ವ್ಯೂಹ ರಚನೆಯಲಿ' ಎಂದು...

★★★

ಬೆಳಿಗ್ಗೆ ತಿಂಡಿ ತಿಂದು ಅವರು ಹೊರಡುವ ತನಕವೂ ಕಾರ್ತೀಕ ಎದ್ದಿರಲಿಲ್ಲ. ಬಹಳ ಹೊತ್ತಿನ ನಂತರ ಎದ್ದವನು ಅಪ್ಪನೊಂದಿಗೆ ಒಂದೂ ಮಾತಾಡದೆ ಮಠಕ್ಕೆ ನಡೆದುಬಿಟ್ಟ. ಈ ಮೌನ ಸಮರ ಎರಡು ಮೂರು ದಿನಗಳೇ ಜರುಗಿದವೇನೋ. ಒಂದು ಸಂಜೆ ಭಟ್ಟರೇ ಒತ್ತಾಯದಿಂದ ಮಗನನ್ನ ಕೂರಿಸಿಕೊಂಡು ಮಾತಿಗೆಳೆದರು.

'ಯಾವ ವಿಷಯವನ್ನೂ ಏಕಪಕ್ಷೀಯವಾಗಿ ಅಥವಾ ಕೋಪವಶವಾಗಿ ವಿವೇಚಿಸಬಾರದು ಎನ್ನುವುದನ್ನ ಗುರುಗಳೇ ಹೇಳುತ್ತಿರಲಿಲ್ಲವೆ ಕಾರ್ತಿ. ವಿಚಾರ ಮಾಡಿ ನೋಡು. ಅವಳನ್ನ ನಾವ್ಯಾರು ಕರೆದಿರಲಿಲ್ಲ. ಬಂದಳು, ಹೋದಳು.'

'ಆಯಿತಲ್ಲ, ಮುಗಿಸಿಬಿಡಿ ಅಲ್ಲಿಗೆ, ಮತ್ತೆ ಈ ಕಡೆ ಮುಖ ಹಾಕಬೇಡ ಅಂತ ಹೇಳಿದ್ದೀರಷ್ಟೆ?'

'ಇಲ್ಲ, ಯಾವುದಕ್ಕೂ ನಿನ್ನೊಂದಿಗೆ ಮಾತಾಡಿ ಹೇಳುವ ಎಂದುಕೊಂಡಿದ್ದೇನೆ. ನಿನ್ನನ್ನ ಬಿಟ್ಟು ನಾನು ನಿರ್ಣಯ ತಗೊಳ್ಳಿಕ್ಕಾಗುತ್ತೇನೊ? ಅವಳು ವರ್ಷಕ್ಕೊಂದು ಬಾರಿ ಬಂದು ಹೋಗುವುದರಲ್ಲಿ ತಪ್ಪಿಲ್ಲವೇನೊ ಅನ್ನಿಸುತ್ತೆ ನನಗೆ. ಮುಖ್ಯ ನಿನ್ನ ಅಮ್ಮನ ಹೆತ್ತ ಕರುಳಿಗಾದರೂ ಒಂದಷ್ಟು ಸಾಂತ್ವನ ಸಿಗುತ್ತೆ ಅಂತ. ಹೊತ್ತು ಹೆತ್ತು ಬೆಳೆಸಿದ ಕರುಳಲ್ಲವೇನೊ? ಹಾಗಂತ ಅವಳು ತಪ್ಪು ಮಾಡಿಲ್ಲ ಅಂತ ನಾನು ಹೇಳುವುದಿಲ್ಲ. ತಪ್ಪಾಗುತ್ತದೆ, ಅದಕ್ಕೆ ಪಶ್ಚಾತ್ತಾಪವೂ ಇರುತ್ತೆ ಅಲ್ಲವೆ? 'ನ ಕಶ್ಚಿನ್ನಾಪರಾಧ್ಯತಿ' ಅಂತ ವಾಲ್ಮೀಕಿಯ ರಾಮನೆ ಹೇಳಿಲ್ಲವೆ? ನಮ್ಮ ನಾಗಚಂದ್ರನು ರಾವಣನ ಕುರಿತಾಗಿ ಹೇಳೊಲ್ವೆ 'ಅಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೆ' ಅಂತ. ರಾವಣ ಪಶ್ಚಾತ್ತಾಪ ಪಡ್ಲಿಲ್ಲ, ಅದು ಬೇರೆ. ಆದರೆ ಇವಳು ಹಾಗಲ್ಲ. ಸ್ನೇಹಿತರು ಬಂದ ಹಾಗೆ ಬಂದು ಹೋಗಿ ಮಾಡಬಹುದಲ್ವೆ?'

'ಇವತ್ತು ಅಷ್ಟೆ, ನಾಳೆ ನಾಲ್ಕು ದಿನ ಉಳಿಲಿಕ್ಕೆ ಬರ್ತಾರೆ, ನಾಡಿದ್ದು ಹಬ್ಬ ಹುಣ್ಣಿಮೆಗೆ ಅಂತ... ಹೀಗೇ ಮುಂದುವರಿಯುತ್ತೆ. ಜಾತಿ ಧರ್ಮ ಎಲ್ಲ ಕುಲಗೆಟ್ಟು ಹೋಗುತ್ತೆ.'

'ಅವನು ಮಾಂಸಾಹಾರ ಎಲ್ಲ ಬಿಟ್ಟು ನಮ್ಮವರ ಹಾಗೇ ಜೀವನ ಮಾಡ್ತಿದಾನಂತಪ್ಪ' ರುಕ್ಮಿಣಿ ಮಧ್ಯ ಬಾಯಿ ಹಾಕಿದಳು.

'ನೀನು ಮಧ್ಯೆ ಬಾಯಿ ಹಾಕಬೇಡಮ್ಮ, ಅದಿರಲಿ ಅಪ್ಪ, ನೀವ್ಯಾಕೆ ಇಷ್ಟು ದಿನ ನಿಮ್ಮನ್ನ ತಿರಸ್ಕರಿಸಿದ ಅವಳ ಪಕ್ಷ ವಹಿಸುತ್ತಿದ್ದೀರಿ? ನಾನು ನಿಮಗೆ ಬೇಡ ಅಂತಾದರೆ ಹಾಗೇ ಮಾಡಿಬಿಡಿ. ಅವಳನ್ನೇ ಕರೆದುಕೊಂಡು ಬಂದು ಇಟ್ಟುಕೊಳ್ಳಿ.' ಇಷ್ಟು ಹೇಳಿದವನೆ ದುರ್ದಾನ ತೆಗೆದುಕೊಂಡವನಂತೆ